**ಸಾಕ್ಷಿಯನ್ನು ದಿನಾಂಕಃ 23-01-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ. ಕೆ.ಎಂ. ವಕೀಲರವರಿಂದಃ**

2. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಪೂಜಾರ ಈಶಪ್ಪ ತಂದೆ ಅಡಿವೆಪ್ಪ ಇವರು ಈ ದಾವೆಯಲ್ಲಿ 23 ನೇ ಪ್ರತಿವಾದಿ ಅಂದರೆ ಸರಿ. ಅವರು ಮೃತ ಪಟ್ಟಿರುವರು ಅಂದರೆ ಸರಿ. ಅವರಿಗೆ ಹೆಂಡತಿ ಮಕ್ಕಳು ವಾರಸುದಾರರು ಇರುವರು ಅಂದರೆ ಸರಿ. 23 ನೇ ಪ್ರತಿವಾದಿಗೆ 2 ಜನ ಗಂಡು ಮಕ್ಕಳು ಹಾಗೂ 2 ಜನ ಹೆಣ್ಣು ಮಕ್ಕಳು ಇರುವರು. ದಾವಾ ಮನೆಯಲ್ಲಿ 23 ನೇ ಪ್ರತಿವಾದಿ ವಾಸ ಇದ್ದ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ.

23 ನೇ ಪ್ರತಿವಾದಿಯನ್ನು ಈ ದಾವೆಯಿಲ್ಲ ಸೇರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ.

3. 23 ನೇ ಪ್ರತಿವಾದಿ 31.07.2021 ರಲ್ಲಿ ಮೃತ ಪಟ್ಟರು ಅಂದರೆ ಸರಿ. 23 ನೇ ಪ್ರತಿವಾದಿಯ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸುವಂತೆ ನಾನು ವಕೀಲರಿಗೆ ಮಾಹಿತಿ ನೀಡಿದ್ದೇನೆ. ಆ ರೀತಿ ಮಾಹಿತಿಯನ್ನು ಕಳೆದ 2 ವರೆ ವರ್ಷದ ಹಿಂದೆ ನೀಡಿದ್ದೇನೆ. 23 ನೇ ಪ್ರತಿವಾದಿಯ ವಾರಸುದಾರರನ್ನು ಈ ದಾವೆಯಲ್ಲಿ ಸೇರಿದೇ ಇರುವ ಕಾರಣ ಈ ದಾವೆಯು ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**23-01-2026**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 23.01.2026